ಅ) *ರಾಜ್ಯದಲ್ಲಿ ಹಂಗಾಮಿ ಗ್ರಾಮ ಸಹಾಯಕರುಗಳ ಹುದ್ದೆಯನ್ನು ಖಾಯಂಗೊಳಿಸುವ ಬಗ್ಗೆ ಸರಕಾರ ಭರವಸೆ ನೀಡಿರುವುದೇ?*

ಆ) *ಹಾಗಿದ್ದಲ್ಲಿ, ರಾಜ್ಯದ ಎಷ್ಟು ಜಿಲ್ಲೆಗಳಿಂದ, ಜಿಲ್ಲಾಧಿಕಾರಿಗಳ ವರದಿ ಬಂದಿರುತ್ತದೆ?*

ಇ) *ಸರ್ಕಾರ ಯಾವಾಗ ಈ ಗ್ರಾಮ ಸಹಾಯಕರುಗಳ ಹುದ್ದೆಯನ್ನು ಖಾಯಂ ಗೊಳಿಸುವುದು, ವರದಿ ಬಂದರೂ ವಿಳಂಬವಾಗಲು ಕಾರಣಗಳೇನು?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಇಲ್ಲ.

ಆ) 18.

ಇ) ಈ ವಿಚಾರದಲ್ಲಿ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 29424:94 ಇತ್ಯರ್ಥಕ್ಕಾಗಿ ಬಾಕಿ ಇರುವುದರಿಂದ ಈ ಪ್ರಶ್ನೆಗೆ ಈ ಹಂತದಲ್ಲಿ ಉತ್ತರಿಸಲಾಗುವುದು ಸಾಧ್ಯವಾಗುವುದಿಲ್ಲ.

ಮನೆ ಬಾಡಿಗೆ ನಿಯಂತ್ರಣ ಕಾಯ್ದೆ ರದ್ದುಪಡಿಸಿರುವ ಬಗ್ಗೆ.

606 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮನೆ ಬಾಡಿಗೆ ನಿಯಂತ್ರಣ ಕಾಯ್ದೆ ರದ್ದುಪಡಿಸಿರುವುದರಿಂದ ಮಧ್ಯಮವರ್ಗದ ಮತ್ತು ಬಡಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಮನೆ ಬಾಡಿಗೆ ನಿಯಂತ್ರಣ ಕಾಯ್ದೆಯನ್ನು ರದ್ದುಪಡಿಸಿರುವುದಿಲ್ಲ.. ಬಾಡಿಗೆ ನಿಯಂತ್ರಣ ಕಾಯ್ದೆ 1961ರ ಕಲಂ 4,5 ಮತ್ತು 10 ಎ ವಿಧಿಗಳನ್ನು ಈ ಕೆಳಗಿನ ನಗರಗಳಲ್ಲಿ ಮಾತ್ರ ಸ್ಥಗಿತ ಗೊಳಿಸಲಾಗಿದೆ.

1) ಬೆಂಗಳೂರು

2) ಹುಬ್ಬಳ್ಳಿ-ಧಾರವಾಡ

3) ಗುಲ್ಬರ್ಗಾ

4) ಮೈಸೂರು

5) ಮಂಗಳೂರು

6) ಶಿವಮೊಗ್ಗ - ಭದ್ರಾವತಿ, ಬಡಜನರಿಗೆ ತೊಂದರೆಯಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕೃಷಿ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ

615 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆಯನ್ನು ಈ ಹಿಂದೆ ಯಾವಾಗ ನಡೆಸಲಾಗಿತ್ತು.

ಆ) ಹಾಗಿದ್ದಲ್ಲಿ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) 1983ರಲ್ಲಿ ನಡೆಸಲಾಗಿತ್ತು

ಆ) ಇಲ್ಲ.

ಇ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸಲು ಕನಿಷ್ಠ 150 ದಿನಗಳ ಕಾಲಾವಕಾಶ ಬೇಕಾಗಿದ್ದು ಮುಂಬರುವ ಲೋಕಸಭಾ ಚುನಾವಣಾ ನಂತರ ಸೂಕ್ತ ಸಮಯವನ್ನು ನಿರ್ಧರಿಸಿ, ಚುನಾವಣೆ ನಡೆಸಲು ಕ್ರಮ ಕೈಗೊಳ್ಳಲಾಗುವುದು.

ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು : ವಿಧಾನ ಸಭಾ ಸದಸ್ಯರಾದ ಶ್ರೀ ಟಿ. ಮುನಿಯಪ್ಪನವರು ಸೌಖ್ಯವಿಲ್ಲದ ಕಾರಣ ಪ್ರಸ್ತುತ 5ನೇ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿ ಕೋರಿ ತಾ. 1.2.96ರಂದು ಪತ್ರವನ್ನು ಬರೆದಿರುತ್ತಾರೆ.

ಶ್ರೀ ಬಿ. ಮುನಿಯಪ್ಪನವರು ಪ್ರಸ್ತುತ 5ನೇ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿ ಕೋರಿದ್ದಾರೆ.

ಮಾನ್ಯ ಸಚಿವರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

(ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ)

ಸಭೆಯು ಒಪ್ಪಿಗೆ ಸೂಚಿಸಿತು.

ಅಧ್ಯಕ್ಷರು : ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

ಅವಧಿ ವಿಸ್ತರಣೆ